# ಸಮರ್ಥ ನಾಯಕನಲ್ಲಿರಬೇಕಾದ ಗುಣಗಳು

ಹಳೇಕೋಟೆ ರಮೇಶ್



ಯಾವುದೇ ಮಹತ್ವದ ಕಾರ್ಯವನ್ನು ಸಾಧಿಸಲು ಹಲವು ಮಂದಿ ಜನರನ್ನು ಮುನ್ನಡೆಸಬಲ್ಲ ಯೋಗ್ಯ ನಾಯಕನ ಅಗತ್ಯ ವಿದೆ. ಅಂಥ ನಾಯಕತ್ವವನ್ನು ಹೊಂದಿರುವ ವ್ಯಕ್ತಿ ಸಮಾಜವನ್ನು ಸುಧಾರಿಸಬಲ್ಲ. ಈ ಕುರಿತು ವಿವೇಚನೆ ನಡೆಸಿರುವ ಲೇಖಕರು ಆಧುನಿಕ ವಿಚಾರ, ಆಸಕ್ತಿಗಳೊಂದಿಗೆ ಸಾಂಪ್ರದಾಯಿಕ ಕೃಷಿ ಜೀವನವನ್ನು ನಡೆಸುತ್ತ ಬಂದಿದ್ದು, ಜನತೆಗೆ ಪ್ರೇರಣೆ ನೀಡಬಲ್ಲ ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ.

ಸಮರ್ಥ ನಾಯಕತ್ವದ ಮಹತ್ವ ಯಾವುದೇ ಸಮಾಜ ಸೇವಾ ಸಂಘಸಂಸ್ಥೆಯ ಸಮಗ್ರ ಅಭಿವೃದ್ಧಿಗೆ ಆವಶ್ಯಕ ಎಂಬ ವಿಚಾರ ವಿವಾದಾತೀತವಾದುದು. ಉತ್ತಮ ನಾಯಕನಿಲ್ಲದ ಸಂಸ್ಥೆಯನ್ನು ನಾವಿಕನಿಲ್ಲದ ನಾವೆಯಂತೆ ಅಥವಾ ಹಾಯಿ ಇಲ್ಲದ ಹಡಗಿನಂತೆ ಎಂದು ಹೇಳಬಹುದಾಗಿದೆ. ಇದನ್ನು ಬಹುತೇಕ ಜನ ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಾರೆ. ಆದರೆ ಇಂದಿನ ದಿನಗಳಲ್ಲಿ ಹುಟ್ಟಿನಿಂದ ನಾಯಕತ್ವದ ಗುಣಗಳನ್ನು ಪಡೆದಿರುವ ವ್ಯಕ್ತಿಗಳು ವಿರಳವಾಗುತ್ತಿದ್ದಾರೆ. ಇಂದಿನ ಸಂಘ ಸಂಸ್ಥೆಗಳ ವ್ಯವಸ್ಥೆಯ ಚೌಕಟ್ಟಿನೊಳಗಡೆ , ಧೈರ್ಯಶಾಲಿ ಮತ್ತು ಗುಣಗ್ರಾಹಿ ವ್ಯಕ್ತಿತ್ವದ ವೈವಿಧ್ಯಮಯ ಮೂಸೆಯಲ್ಲಿ ಪಳಗಿ ತಯಾರಾದ ನಾಯಕರನ್ನು ನಾವು ಕಾಣಬಹುದಾಗಿದೆ. ಅಂದರೆ, ಇಂದಿನ ದಿನಗಳಲ್ಲಿ ಹುಟ್ಟಿನಿಂದ ನಾಯಕತ್ವದ ಗುಣ ಹೊಂದಿರುವವರು ವಿರಳ, ಬದಲಾಗಿ ತರಬೇತಾದ ನಾಯಕ ರನ್ನು ನಾವು ಕಾಣುತ್ತಿದ್ದೇವೆ.

ನಿಜವಾದ ನಾಯಕತ್ವಗುಣವಿಲ್ಲದ ವ್ಯಕ್ತಿಗಳು ಅವರು ಪ್ರತಿನಿಧಿಸುತ್ತಿರುವ ಸಂಸ್ಥೆಯ ಅಭಿವೃದ್ಧಿಗೆ ಅಪಾಯಕಾರಿ ಯಾಗಿರುತ್ತಾರೆ. ಸಂಸ್ಥೆಯ ಪ್ರಗತಿ ಅಥವಾ ವಿನಾಶಕ್ಕೆ ನಾಯಕ ನಲ್ಲಿರುವ ಗುಣಾತ್ಮಕ ಅಥವಾ ನ್ಯೂನತೆಗಳೇ ಕಾರಣವಾಗು ತ್ತದೆ. ಒಬ್ಬ ಯಶಸ್ವೀ ನಾಯಕನಾಗಿ ಗುರುತಿಸಲ್ಪಡಬೇಕಾ ದವನು ಸೂಕ್ಷ್ಮಮತಿಯುಳ್ಳವನೂ, ಉತ್ತಮ ಕೆಲಸಗಾರನೂ ಆಗಿರಬೇಕಲ್ಲದೆ, ಒಳ್ಳೆಯ ಗುಣಾತ್ಮಕ ಅಂಶಗಳನ್ನು ಒಳ ಗೊಂಡ ಮತ್ತು ಸತ್ಪ್ರೇರಣೆಯನ್ನು ನೀಡುವ ಕಾರ್ಯಗಳನ್ನು ನಿರ್ವಹಿಸಬೇಕು.

ಎಮರ್ಸನ್ ಎಂಬಾತನ ಅಭಿಪ್ರಾಯದಂತೆ ''ನಾನು ಭೇಟಿ ಮಾಡುವ ಪ್ರತಿಯೊಂದು ವ್ಯಕ್ತಿಯೂ ಒಂದಲ್ಲೊಂದು ವಿಧದಲ್ಲಿ ನನಗಿಂತ ಮಿಗಿಲಾದವನು'' ಎಂಬ ಭಾವನೆ ನಮ್ಮಲ್ಲಿ ಹುದುಗಿರಬೇಕು. ಮಾತ್ರವಲ್ಲ ಯಾವತ್ತೂ ನಾವು ಇನ್ನೊಬ್ಬರಿಂದ ಕಲಿತುಕೊಳ್ಳಬೇಕಾದುದು ಬಹಳಷ್ಟಿದೆ ಎಂಬ ಪ್ರಜ್ಞೆ ನಮ್ಮಲ್ಲಿರಬೇಕು. ವಯೋಮಾನದ ಪ್ರಭೇದವಿಲ್ಲದೆ, ಎಲ್ಲರಿಂದಲೂ ನಾವು ತಿಳಿದುಕೊಳ್ಳಬೇಕಾದ ವಿಚಾರಗಳು ಬಹಳಷ್ಟಿರುತ್ತವೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಆಡಳಿತ ನಿರ್ವಹಣೆ ಮತ್ತು ನಾಯಕತ್ವವಹಿಸುವ ವಿಚಾರದಲ್ಲಿ ಅಗತ್ಯ ವಾಗಿ ಪಾಲಿಸಬೇಕಾದ್ದನ್ನು ನಾವು ಎಲ್ಲರಿಂದಲೂ ಕಲಿಯ ಬಹುದಾಗಿದೆ. ಅಂತೆಯೇ ಕೆಲವರಿಂದ ನಾವು ಏನನ್ನು ಮಾಡಬಾರದು ಎಂಬ ಅಂಶಗಳನ್ನು ಕೂಡ ಕಲಿಯಬೇಕು. ಹಾಗಿದ್ದಲ್ಲಿ ಮಾತ್ರ ನಾವು ನಮ್ಮೊಳಗಿನ ನಿಜವಾದ ನಾಯಕ ಹೊರಹೊಮ್ಮುವಂತೆ ಮಾಡಬಹುದು.

ನಿಮ್ಮ ಸುತ್ತಮುತ್ತಲ ಜನರೊಂದಿಗೆ ಪ್ರೀತಿ, ವಿಶ್ವಾಸ, ಸೌಹಾರ್ದತೆ ಬೆಳೆಸಿಕೊಳ್ಳಿ. ಅವರೊಂದಿಗೆ ದರ್ಪ ತೋರದೆ ಮಾತನಾಡಿರಿ. ಅವರ ಅವಹಾಲುಗಳನ್ನು ಕೇಳುವ ತಾಳ್ಮೆ ಯಿರಿಸಿಕೊಳ್ಳಿ. ಎಲ್ಲಕ್ಕಿಂತ ಮಿಗಿಲಾಗಿ ಅವರು ನಿಮ್ಮ ಬಗ್ಗೆ ಗೌರವ ಭಾವನೆ ಇರಿಸಿಕೊಳ್ಳುವಂತೆ ವ್ಯವಹರಿಸಿ. ನಿಮ್ಮೊಂದಿಗೆ ವ್ಯವಹರಿಸುವ ಜನರಿಗೆ ಅವರಲ್ಲಿರುವ ಸಾಮರ್ಥ್ಯದ ಅರಿ ವಾಗುವಂತೆ, ಅವರ ಸ್ವಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಂಡು ಹೇಗೆ ಅತ್ಯುತ್ತಮ ಫಲಿತಾಂಶ ಪಡೆಯಬಹು ದೆನ್ನುವುದನ್ನು ಮನದಟ್ಟು ಮಾಡಿಕೊಡಿ. ಫೀಲ್ಡ್ ಮಾರ್ಷಲ್ ಮೊಂಟೆಗೋಮರಿ ಹೇಳುವಂತೆ ''ಒಬ್ಬ ನಾಯಕ ನಿಚ್ಚಳವಾದ ಆಶಾವಾದಿಯಾಗಿರಬೇಕು'', ಆತ ಜನರಲ್ಲಿ ಭರವಸೆ ಮತ್ತು ಹುಮ್ಮಸ್ಸನ್ನು ಸದಾ ತುಂಬುತ್ತಿರಬೇಕು.

ನೀವು ನಿಮ್ಮ ವ್ಯಕ್ತಿತ್ವವನ್ನು ಇದೇ ರೀತಿಯಲ್ಲಿ ರೂಪಿಸಿ ಕೊಂಡಲ್ಲಿ ಇತರರ ಸಾಮರ್ಥ್ಯವನ್ನು ಹೊರತೆಗೆಯಬಲ್ಲಿರಿ ಮತ್ತು ನಿಮ್ಮ ನಿಜವಾದ ನಾಯಕತ್ವದ ಗುಣಗಳನ್ನು ರೂಪಿಸ

ಬಲ್ಲಿರಿ. ನಿಮ್ಮ ವ್ಯಕ್ತಿತ್ವ ಮತ್ತು ಸ್ಫೂರ್ತಿಯುತ ವ್ಯವಹಾರದಿಂದ ಏನನ್ನೂ ಸಾಧಿಸಬಹುದಾಗಿದೆ, ಖ್ಯಾತ ಉರ್ದು ಕವಿ ಇಕ್ಬಾಲ್ ಹೇಳುವಂತೆ ''ನೀನು ನಿನ್ನ ಸ್ವಯಂ ವ್ಯಕ್ತಿತ್ವವನ್ನು ಸ್ವಚ್ಛ ಮತ್ತು ಗೌರವಯುತವಾಗಿರಿಸಿಕೊಳ್ಳುವ ಮೂಲಕ, ಆ ದಯಾಮಯನಾದ ದೇವರನ್ನು ಮೆಚ್ಚಿಸಿ, ಆ ದೇವರೂ ಕೂಡ ಸ್ವತಃ ನಿನ್ನ ಮುಂದೆ ನಿಂತು ಏನು ಬೇಕು ಮಗನೆ ಎಂದು ಕೇಳುವಷ್ಟು ಸಾಧನೆ ಮಾಡಬಹುದಾಗಿದೆ.''

ನಿಮ್ಮ ಮುಂದಿರುವ ಹೊಣೆಗಾರಿಕೆಗಳಿಂದ ಯಾವತ್ತೂ ತಪ್ಪಿಸಿಕೊಳ್ಳದಿರಿ. ಅವುಗಳನ್ನು ಸ್ವಾಗತಿಸಿ, ನಿಮ್ಮ ಮುಂದಿರುವ ಸವಾಲುಗಳನ್ನು ಗೌರವಯುತವಾಗಿ ಪಾರಿತೋಷಕವೆಂಬಂತೆ ಸ್ವೀಕರಿಸಿ. ನಿಮ್ಮ ವ್ಯಕ್ತಿತ್ವದ ಮೌಲ್ಯವನ್ನು ತೋರ್ಪಡಿಸಲು ಇದೊಂದು ಅವಕಾಶ ಎಂಬುದನ್ನು ಮರೆಯದಿರಿ. ಅನ್ಯಥಾ ವಜ್ರಕ್ಕೆ ಸಮನಾದ ನಿಮ್ಮ ವ್ಯಕ್ತಿತ್ವಕ್ಕೆ ಮೆರುಗು ಬಾರದು. ನಿಮ್ಮ ವ್ಯಕ್ತಿತ್ವ ಎಲೆಮರೆಯ ಕಾಯಂತೆ ಮರೆಯಾಗಬಹುದು ಅಥವಾ ಧೂಳು ಹಿಡಿದು ಮಸುಕಾದಂತಾಗಬಹುದು. ನೆನಪಿಡಿ, ಜವಾಬ್ದಾರಿ ಯಾವತ್ತೂ ಒಂದು ಸವಾಲು. ಯಾವತ್ತು ಯಾರಿಗೆ ಜವಾಬ್ದಾರಿಗಳು ಹೆಚ್ಚಿವೆಯೋ, ಸವಾಲು ಗಳ ಸರಮಾಲೆಯೇ ಮುಂದಿಹುದೋ ಅಂತವರಿಗೆ ಪ್ರಜ್ವಲಿ ಸುವ ವ್ಯಕ್ತಿತ್ವವನ್ನು ತೋರ್ಪಡಿಸುವ ಅವಕಾಶಗಳೂ ಖಂಡಿತ ವಾಗಿ ವಿಪುಲ. ನಿಮ್ಮ ನಿಜವಾದ ವ್ಯಕ್ತಿತ್ವ ಮತ್ತು ಸಾಮರ್ಥ್ಯ ವನ್ನು ಹೊರಗೆಡಹಿರಿ.

ತೊಂದರೆಗಳನ್ನು ಮುಚ್ಚಿಹಾಕಲು ಯತ್ನಿಸದಿರಿ. ಅವುಗಳನ್ನು ಎದುರಿಸಿ, ತೊಂದರೆಗಳಿಂದ ವಿಮುಖರಾಗಲು ಯತ್ನಿಸದಿರಿ, ಅವುಗಳನ್ನು ಪರಿಹರಿಸಲು ಮುಂದಾಗಿ. ಯಾವುದೇ ಕೆಲಸ ಪರಿಪೂರ್ಣವಾಗಬೇಕಾದರೆ ನೀವು ಪರಿಪಕ್ವತೆಯೊಂದಿಗೆ ಕಾರ್ಯೋನ್ಮುಖರಾಗಬೇಕು. ತೊಂದರೆ ರಹಿತವಾದ ಜೀವನವನ್ನೇ ಪಡೆಯಬೇಕೆಂದು ಹಾತೊರೆಯದಿರಿ. ಅದೆಂದೂ ಸಾಧ್ಯವಿಲ್ಲ. ಒಂದು ವೇಳೆ ಇದು ಸಾಧ್ಯವಿದ್ದರೂ, ನಿಮಗೆ ಜೀವನೋತ್ಸಾಹ ಖಂಡಿತ ಸಿಗದು. ಇಂತಹ ಪೇಲವ ಬದುಕನ್ನು ನೀವು ನಿರೀಕ್ಷಿಸುವುದಾದಲ್ಲಿ, ನಿಮ್ಮ ಮರಣಾನಂತರ ಜನಮಾನಸದ ನೆನಪಿನಿಂದ ಬಹು ಬೇಗ ಅಳಿದು ಹೋಗುವಿರಿ. ಜನಮಾನಸದಲ್ಲಿ ಚಿರಕಾಲ ನೆನಪುಳಿಯುವಂತಹ ಕಾರ್ಯವೆಸಗಬೇಕೆಂಬ ಅಪೇಕ್ಷೆ ನಿಮಗಿಲ್ಲವೆ? ಹಾಗಿದ್ದಲ್ಲಿ ಸಮಸ್ಯೆಗಳನ್ನು ಎದುರಿಸುವ ಸವಾಲನ್ನು ಸ್ವೀಕರಿಸಿ, ನೀವು ಖಂಡಿತ ಜಯಶಾಲಿಯಾಗುವಿರಿ.

ಯಾವುದೇ ನಿರ್ಧಾರದ ಹಿಂದೆ ಸರಿಯದಿರಿ. ನೀವು ಕೈಗೊಂಡ ನಿರ್ಧಾರಗಳಲ್ಲಿ ಶೇಕಡ ೧೦೦ ಜಯ ಸಿಗಬೇಕೆಂಬ ಆಶಾವಾದವನ್ನು ಎಂದೂ ಹೊಂದದಿರಿ. ಅದು ಖಂಡಿತ ಅಸಾಧ್ಯ. ಆಡಳಿತ ನಿರ್ವಹಣೆಯು ಒಂದು ಪಂದ್ಯವಿದ್ದಂತೆ. ಒಂದು ಪಂದ್ಯದಲ್ಲಿ ಆಟಗಾರನ ಸಾಮರ್ಥ್ಯವನ್ನು ಅಳೆಯುವ ಮಾನದಂಡ ಸೋಲು-ಗೆಲುವಲ್ಲ. ಆತ ಎಷ್ಟು ಚೆನ್ನಾಗಿ ಆಡಿದ ಎಂಬುದು ಮುಖ್ಯ. ನೆನಪಿಡಿ, ನಿಮ್ಮ ಅಳತೆ ಮೀರಿದ ಆಶಾವಾದ ಮತ್ತು ಕಾತರತೆ ನಿಮ್ಮ ನಿಜ ಸಾಮರ್ಥ್ಯವನ್ನು ಧೃತಿಗೆಡಿಸುತ್ತದೆ. ಇದರಿಂದ ನಿಮ್ಮ ಕೈಯಲ್ಲಿರುವ ಕಾರ್ಯದ ನಿರ್ವಹಣೆಯಲ್ಲಿ ನಿಮ್ಮ ಪರಿಪೂರ್ಣತೆಗೂ ಧಕ್ಕೆ ಬರಬಹುದು. ಆದ್ದರಿಂದ ನಿಜವಾದ ನಾಯಕ ಯಶಸ್ವಿಯಾಗಬೇಕಾದಲ್ಲಿ ನೆನಪಿಡಬೇಕಾದುದು, ''ಅಭ್ಯಸಿಸಿ ಅಭ್ಯುದಯವನ್ನು ಕಾಣಿರಿ'' ಎಂಬುದಾಗಿದೆ.

ಒಬ್ಬ ನಾಯಕ, ತನ್ನ ಸಂಸ್ಥೆಯ ಬಗ್ಗೆ ನಿಖರವಾದ ಮಾಹಿತಿಯನ್ನು ಹೊಂದಿರಬೇಕು ಮತ್ತು ಮುನ್ನಡೆಸಬೇಕಾದ ಯೋಜನೆಗಳ ಬಗ್ಗೆ ಆಲೋಚನಾಪೂರ್ಣ ದೃಷ್ಟಿಕೋನ ಹೊಂದಿರಬೇಕು. ನಿಮ್ಮ ದೃಷ್ಟಿಕೋನ ಸ್ವಯಂ ಸ್ಫೂರ್ತಿಯಿಂದ ಹೊರಬರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಧೈರ್ಯ ಮತ್ತು ದೃಢತೆಯನ್ನು ಮೈಗೂಡಿಸಿಕೊಳ್ಳುವುದರೊಂದಿಗೆ ನೀವು ನಿಮ್ಮ ಜನರ ಆತ್ಮಸ್ಥೈರ್ಯವನ್ನು ಮತ್ತು ಜವಾಬ್ದಾರಿಯ ಅರಿವನ್ನು ಹೆಚ್ಚಿಸಬಹುದು. ತರಬೇತಿ ಆಡಳಿತ ನಿರ್ವಹಣೆಯ ಮೂಲ ಮಂತ್ರ ನಿಮ್ಮೊಂದಿಗಿರುವವರನ್ನು ಸಂಸ್ಥೆಯ ನಾಯಕತ್ವ ವಹಿಸುವಂತೆ ಪ್ರೇರೇಪಿಸಿ, ಕೇವಲ ಹುದ್ದೆಗಳ ಗಣನೆಯಲ್ಲದೇ ನಿಜವಾದ ಅರ್ಥದಲ್ಲಿ ನಾಯಕರನ್ನು ರೂಪುಗೊಳಿಸುವಲ್ಲಿ ಯಶಸ್ವಿಯಾಗಿರಿ. ನೀವು ರೂಪಿಸುವ ನಾಯಕರೇ ನಿಮ್ಮ ಸ್ವಸಾಮರ್ಥ್ಯವನ್ನು ತೋರುವ ಕೈಗನ್ನಡಿ.

ಕೊನೆಯದಾಗಿ ಒಂದು ಚೀನೀ ಗಾದೆಯನ್ನು ನೆನಪಿಡಿ ''ಬೆಟ್ಟ ಗುಡ್ಡಗಳಲ್ಲಿ ಹರಿಯುತ್ತಿರುವ ನೀರಿನ ತೊರೆಗಳು ನದಿ-ಸಮುದ್ರಗಳನ್ನೇ ಏಕೆ ಸೇರುತ್ತವೆಯೆಂದರೆ ನದಿ-ಸಮುದ್ರಗಳು ಕೆಳಮಟ್ಟದಲ್ಲಿವೆ'' ಅಂತೆಯೇ ನಿಜವಾದ ನಾಯಕನಾದವನು ಎಂದೂ ತಲಸ್ಪರ್ಶಿಯಾಗಿರಬೇಕು. ತಾನು ಇತರರಿಗಿಂತ ಎತ್ತರದಲ್ಲಿರಬೇಕೆಂದು ಅಪೇಕ್ಷೆ ಹೊಂದಿರಬಾರದು.

### ಯಜಮಾನನಾಗಬೇಡಿ, ನಾಯಕರಾಗಿ

ಯಜಮಾನ ತನ್ನ ಜನರಿಂದ ಕೆಲಸ ಮಾಡಿಸುತ್ತಾನೆ
ನಾಯಕ ಅವರನ್ನು ಹುರಿದುಂಬಿಸುತ್ತಾನೆ,
ಯಜಮಾನ ಯಾರು ತಪ್ಪುಗಾರನೆಂದು ತೋರಿಸುತ್ತಾನೆ,
ನಾಯಕ ತಪ್ಪೆಲ್ಲಿಹುದೆಂಬುದನ್ನು ಗುರುತಿಸುತ್ತಾನೆ,
ಯಜಮಾನ ಯಾವತ್ತೂ ''ನಾನು'' ಎನ್ನುತ್ತಾನೆ,
ನಾಯಕ ''ನಾವು'' ಎಂಬ ಭಾವನೆಯನ್ನು ಹೊಂದಿರುತ್ತಾನೆ,
ಯಜಮಾನ ಜನರನ್ನು ನಿಂದಿಸುತ್ತಾನೆ,
ನಾಯಕ ಅವರನ್ನು ಉಪಯೋಗಿಸಿಕೊಳ್ಳುತ್ತಾನೆ,
ನಾಯಕ ಗೌರವವನ್ನೂ ಅರ್ಹತೆಯಿಂದ ಹೊಂದುತ್ತಾನೆ. ❖